# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀಮತಿ. ಶಾಲಿನಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಮುದುವಾಡಿ ಗ್ರಾಮ ಪಂಚಾಯತಿ ಕೋಲಾರ ತಾಲ್ಲೂಕು ಮತ್ತು ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14ಎ ಅಡಿಯಲ್ಲಿ ಮಾನ್ಯ ಉಪಲೋಕಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ D.O.No. Compt/Uplok/BD/5162/2013/ARLO-1, ದಿನಾಂಕ: 04.01.2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು ದಿನಾಂಕ: 16.12.2016 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ಈ ಕೆಳಗಿನಂತೆ ತಿಳಿಸಿರುತ್ತಾರೆ.

1. ಕೋಲಾರ ಜಿಲ್ಲೆ ಮತ್ತು ತಾಲ್ಲೂಕು, ಹೊಳೂರು ಅಂಚೆ ಜನಪನಹಳ್ಳಿ ಗ್ರಾಮ, ಶ್ರೀ. ಈ.ವೆಂಕಟರವಣಪ್ಪ ಬಿನ್ ಲೇ.ವೀರಪ್ಪ ರೆಡ್ಡಿ ತಮ್ಮ ದೂರಿನಲ್ಲಿ ಕೋಲಾರ ಜಿಲ್ಲೆ ಮತ್ತು ತಾಲ್ಲೂಕು (1) ಮುದುವಾಡಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀಮತಿ. ಶಾಲಿನಿ, (2) ಶ್ರೀ. ಕೆ.ಎಸ್. ಭಟ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು, ಪಂಚಾಯತ್, ಕೋಲಾರ ತಾಲ್ಲೂಕು ಮತ್ತು (3) ಶ್ರೀ. ರಮೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ಕೋಲಾರ ಉಪ ವಿಭಾಗ ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. ದೂರಿನ ಸಂಕ್ಷಿಪ್ತ ವಿವರಣೆ:- ಎದುರುದಾರರು ಸರ್ಕಾರದಿಂದ ಸಾರ್ವಜನಿಕರಿಗೆ ಕುಡಿಯುವ ನೀರಿಗಾಗಿ ದಿನಾಂಕ: 26.05.10 ರಂದು ಕೊಳವೆ ಬಾವಿಯನ್ನು ಕೊರೆಸಿದ್ದು, ಸರ್ಕಾರದಿಂದಲೇ ಪಂಪ್‌ಸೆಟನ್ನು ಅಳವಡಿಸಲಾಗಿದೆ. ಆದರೆ, ಸದರಿ ಕೊಳವೆ ಬಾವಿ ಖಾಸಗಿಯವರದೆಂದು ದಿನಾಂಕ: 28.03.12 ರಂದು ಬಾಂಡ್ ಪೇಪರ್‌ನಲ್ಲಿ ದಿನಾಂಕ: 22.03.2012 ರಂದು ನಕಲಿ ಕರಾರು ಮಾಡಿಕೊಟ್ಟಿದ್ದಾರೆ. ಈ ಬಗ್ಗೆ ಪಂಚಾಯಿತಿಯಲ್ಲಿ ಯಾವುದೇ ಸಭಾ ನಡವಳಿಯಾಗಿಲ್ಲ. ಈ ಕೊಳವೆ ಬಾವಿಗೆ ಸಂಬಂಧಿಸಿದಂತೆ, ಸ್ಥಳದ ಮಾಲೀಕರಿಗೆ ತಿಂಗಳಿಗೆ ರೂ. 2,000/- ದಂತೆ ಟಾಸ್ಕ್ ಫೋರ್ಸ್‌ನಿಂದ ಪಾವತಿಸಲು ಬಿಲ್ ಮಾಡಿಕೊಡುವಂತೆ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪತ್ರ ಬರೆದಿದ್ದಾರೆ. ಸದರಿ ಕೊಳವೆ ಬಾವಿ ಇರುವ ಸ್ಥಳದಲ್ಲಿ ಮೋಟಾರ್ ದುರಸ್ತಿಯಾಗಿದ್ದು, ಅದನ್ನು ದುರಸ್ತಿಪಡಿಸಲು ಜಲಗಾರರಾದ ಶ್ರೀ. ಎ.ರಾಮಚಂದ್ರ ರವರು 1ನೇ ಎದುರುದಾರರಿಗೆ ಮನವಿ ಮಾಡಿದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲ. ಸರ್ಕಾರಿ ಕೊಳವೆ ಬಾವಿಗೆ ಖಾಸಗಿಯವರಿಗೆ ಹಣ ನೀಡಲು ಯಾವುದೇ ಅವಕಾಶವಿಲ್ಲದಿದ್ದರೂ ಸಹ ಎದುರುದಾರರು ಸುಳ್ಳು ದಾಖಲೆ ಸೃಷ್ಟಿಸಿ, ಹಣ ನೀಡಿದ್ದಾರೆ. ಕುಡಿಯುವ ನೀರಿನ ಕೊಳವೆ ಬಾವಿಗಳು ಇದ್ದರೂ ಸಹ ವಿದ್ಯುತ್ ಸಂಪರ್ಕ ಕಲ್ಪಿಸದೇ ಸಾರ್ವಜನಿಕರಿಗೆ ನೀರು ಸರಬರಾಜು ಮಾಡುವಲ್ಲಿ ಅಡಚಣೆ ಉಂಟು ಮಾಡಿರುವುದಾಗಿ ಹೇಳಿದ್ದಾರೆ.

3. ದೂರಿಗೆ ಸಂಬಂಧಿಸಿದಂತೆ ತನಿಖೆ ಕೈಗೊಂಡು ವರದಿ ಸಲ್ಲಿಸಲು 2ನೇ ಎದುರುದಾರರಿಗೆ ಆದೇಶಿಸಿದ್ದು, ಸದರಿಯವರಿಗೆ ಸಾಕಷ್ಟು ಕಾಲಾವಕಾಶ ನೀಡಿದ್ದರೂ ಸಹ ತನಿಖಾ ವರದಿಯನ್ನು ಹಾಜರುಪಡಿಸದೇ ಇರುವುದರಿಂದ, ಗೌರವಾನ್ವಿತ ಉಪಲೋಕಾಯುಕ್ತ ರವರ ನಿರ್ದೇಶನದಂತೆ ದಿನಾಂಕ: 24.09.13 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ವರದಿಯನ್ವಯ ಇಲಾಖಾ ವಿಚಾರಣೆಯು ನಡೆದಿದೆ.

4. ಮುಂದುವರೆದು, ದೂರಿಗೆ 1 ಮತ್ತು 3ನೇ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಕೋಲಾರ ತಾಲ್ಲೂಕು ಮುದುವಾಡಿ ಗ್ರಾಮ ಪಂಚಾಯಿತಿ ಜನ್ನಪ್ಪನಹಳ್ಳಿ ಗ್ರಾಮದ ಕುಡಿಯುವ ನೀರಿಗೆ ಹಾಹಾಕಾರ ಉಂಟಾದ ಕಾರಣ, ಯಾರು ಕೊಳವೆ ಬಾವಿಗಳಿಂದ ನೀರು ಬಿಡಲು ಒಪ್ಪದ ಕಾರಣ ಶ್ರೀ. ವೆಂಕಟರಮಣಪ್ಪ ಬಿನ್ ಲೇ.ರಾಮಪ್ಪ ರವರಿಗೆ ಸೇರಿದ ಸರ್ವೇ ನಂ. 133 ರ 1 ಎಕರೆ 19 ಗುಂಟೆ ಜಮೀನಿನಲ್ಲಿ 2 ಬಾವಿಗಳಿದ್ದು, ಉತ್ತರ ಭಾಗದಲ್ಲಿರುವ ಕೊಳವೆ ಬಾವಿ ನೀರನ್ನು ಕುಡಿಯುವ ನೀರು ಸರಬರಾಜು ಮಾಡಲು ಸರ್ಕಾರದ ವತಿಯಿಂದ ತಿಂಗಳಿಗೆ ರೂ. 2,000/– ಗಳನ್ನು ಪಾವತಿ ಮಾಡುವುದಾಗಿ ಒಪ್ಪಿ ಕರಾರು ಮಾಡಲಾಗಿದೆ. ಈ ಬಗ್ಗೆ ಸರ್ವ ಸದಸ್ಯರಿಂದ ಚರ್ಚಿಸಲಾಗಿದೆ. ಆದರೆ, ಕೈತಪ್ಪಿನಿಂದ ಹಾಗೂ ಕಣ್ತಪ್ಪಿನಿಂದ ಸಭಾ ನಡವಳಿ ಪುಸ್ತಕದಲ್ಲಿ ದಾಖಲಾಗಿಲ್ಲ. ಇದು ತನ್ನ ತಪ್ಪಾಗಿದೆ, ಮೋಟಾರ್ ಪಂಪ್‌ಸೆಟ್ ರಿಪೇರಿ ಹಲವಾರು ಬಾರಿ ಮಾಡಿಸಿದರೂ ವಿದ್ಯುತ್ ಏರುಪೇರುಗಳಿಂದ ಆಗಿಂದಾಗ್ಗೆ ಮೋಟಾರ್ ದುರಸ್ತಿಗೆ ಬರುತ್ತಿದ್ದು, ಆ ಕೊಳವೆ ಬಾವಿ ಇರುವ ಸ್ಥಳಕ್ಕೆ ಸಂಬಂಧಪಟ್ಟಂತೆ ಅನುಮಾನ ಬಂದ ಕಾರಣ ತಾಲ್ಲೂಕು ಪಂಚಾಯತ್‌ಗೆ ನೀಡಿದ ಬಿಲ್ಲನ್ನು ಹಿಂಪಡೆದಿರುವುದಾಗಿ ಹೇಳಿದ್ದಾರೆ.

5. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಶ್ರೀ. ವೆಂಕಟರಮಣಪ್ಪ ಬಿನ್ ರಾಮಪ್ಪ, ಜನಪನಹಳ್ಳಿ ಗ್ರಾಮ ರವರ ಸರ್ವೇ ನಂ. 133 ರ 1 ಎಕರೆ 19 ಗುಂಟೆ ಜಮೀನಿನಲ್ಲಿ ಕೊಳವೆ ಬಾವಿ ಇರುವ ಬಗ್ಗೆ ದಿನಾಂಕ: 23.01.12 ರಂದು ಕೋಲಾರ ತಾಲ್ಲೂಕು ತಹಶೀಲ್ದಾರ್‌ರವರು ಸರ್ವೇ ಮಾಡಿ, ನಕ್ಷೆ ತಯಾರಿಸಿ, ಸದರಿ ಕೊಳವೆ ಬಾವಿ ಸರ್ವೇ ನಂ. 133 ರೊಳಗೆ ಬರುತ್ತದೆಂದು ತಿಳಿಸಿದ್ದಾರೆ. ಸದರಿ ಗ್ರಾಮಕ್ಕೆ ಸಂಬಂಧಿಸಿದಂತೆ ನೀರಿನ ಅಭಾವ ಇರುವುದರಿಂದ, 1ನೇ ಎದುರುದಾರರು ಸದರಿ ಗ್ರಾಮ ಪಂಚಾಯತ್‌ನಲ್ಲಿ ಠರಾವು ಮಾಡಿ ತಿಂಗಳಿಗೆ ರೂ. 2,000/– ಪಾವತಿಸಲು ವರದಿ ಸಲ್ಲಿಸಿದ ಮೇರೆಗೆ ಟಾಸ್ಕ್ ಫೋರ್ಸ್‌ನಲ್ಲಿ ಅನುಮತಿ ಪಡೆದುಕೊಂಡು ಸದರಿ ಜಮೀನಿನ ಮಾಲೀಕರಿಗೆ ದಿನಾಂಕ: 17.09.2012ರಂದು ಪಿ.ಜಿಬಿ ಬ್ಯಾಂಕ್‌ನ ಚೆಕ್‌ನ ಮೊಬಲಗು ರೂ. 8,128/– ನ್ನು ಅವರ ಹೆಸರಿಗೆ ಚೆಕ್ ಬರೆಯಲಾಗಿದೆ. ಈ ಬಗ್ಗೆ ಆಕ್ಷೇಪಣೆ ಬಂದ ಕಾರಣ ಚೆಕ್ ತಡೆಹಿಡಿಯಲಾಗಿದೆ. ದೂರುದಾರರು ಮತ್ತು ಇತರರು ಸದರಿ ಜಮೀನಿನ ಮಾಲೀಕರಾದಿ ಶ್ರೀ. ವೆಂಕಟರಮಣಪ್ಪ ಬಿನ್ ರಾಮಪ್ಪ ರವರ ವಿರುದ್ಧ ಕೋಲಾರದ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಅಸಲು ದಾವಾ ಸಂ: 826/2011 ರಂತೆ ಪ್ರಕರಣ ದಾಖಲಿಸಿದ್ದಾರೆ. ಸದರಿಯವರಿಗೆ ಸಂಬಂಧಪಟ್ಟಂತೆ ಯಾವುದೇ ಹಣ ಮಂಜೂರು ಮಾಡಿಲ್ಲವೆಂದು ಹೇಳಿ, 1ನೇ ಎದುರುದಾರರ ಆಕ್ಷೇಪಣೆಯ ಅಂಶಗಳನ್ನೇ ಪುನರುಚ್ಚರಿಸಿದ್ದಾರೆ.

6. ಮೂರನೇ (3ನೇ) ಎದುರುದಾರರು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

7. ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಸರ್ಕಾರದಿಂದ ತೆಗೆಸಲಾಗದ ಕೊಳವೆ ಬಾವಿ ಸರ್ವೇ ನಂ. 133 ರ ಜಮೀನಿನ ಅಂಚಿನ 5 ಅಡಿ ಒಳಭಾಗದಲ್ಲಿರುವುದು ಸರ್ವೇ ನಕ್ಷೆಯಲ್ಲಿ ದೃಢಪಟ್ಟಿರುವುದೇ ಈ ಎಲ್ಲಾ ಸಮಸ್ಯೆಗಳಿಗೆ ಕಾರಣವೆಂಬ ಸತ್ಯ ತಿಳಿದು ಬಂದ ಕಾರಣ, ಅಧಿಕಾರಿಗಳಿಗೆ ಮನವಿ ಸಲ್ಲಿಸಿ ಕಾನೂನುಬಾಹಿರ ಕರಾರು ರದ್ದುಗೊಳಿಸಿ, ಕೊಳವೆ ಬಾವಿ ಇರುವ ಸ್ಥಳ ನಿಯಮಾನುಸಾರ ಸರ್ಕಾರದ ಸ್ವಾಧೀನಕ್ಕೆ ಪಡೆದುಕೊಂಡು ಗ್ರಾಮದ ಜನತೆಗೆ ಕುಡಿಯುವ ನೀರು ಸರಬರಾಜು ಮಾಡಲು ಕೋರಿರುವುದಾಗಿ ಹೇಳಿದ್ದಾರೆ.

8. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಕೋಲಾರ ತಾಲ್ಲೂಕು ಕೋಳುರು ಹೋಬಳಿ ಮುದುವಾಡಿ ಗ್ರಾಮ ಪಂಚಾಯಿತಿಗೆ ಸೇರಿದ ಜನ್ನಪ್ಪನಹಳ್ಳಿ ಗ್ರಾಮದಲ್ಲಿ ಕುಡಿಯುವ ನೀರಿಗಾಗಿ ಸರ್ಕಾರದ ವತಿಯಿಂದ 3ನೇ ಎದುರುದಾರರು ಸರ್ವೆ ನಂ. 133 ರಲ್ಲಿ ಕೊಳವೆ ಬಾವಿ ಕೊರೆಸಿರುವುದು ಕಂಡು ಬಂದಿದೆ. ಆದರೆ, ಸರ್ವೇ ನಂ. 133 ರ ಜಮೀನು ಶ್ರೀ. ವೆಂಕಟರಮಣಪ್ಪ ಬಿನ್ ರಾಮಪ್ಪ ಎಂಬ ಖಾಸಗಿ ವ್ಯಕ್ತಿಗೆ ಸೇರಿದ ಜಮೀನಾಗಿದೆ. 3ನೇ

ಎದುರುದಾರರು ಸದರಿ ಜಮೀನಿನಲ್ಲಿ ಕೊಳವೆ ಬಾವಿ ಕೊರೆಸುವ ಸಂದರ್ಭದಲ್ಲಿ ಸರ್ಕಾರಕ್ಕೆ ಸೇರಿದ ಆಸ್ತಿಯೋ ಅಥವಾ ಇಲ್ಲವೋ ಎಂಬುದನ್ನು ಖಚಿತಪಡಿಸಿಕೊಂಡು ನಂತರ ಕೊಳವೆದ ಬಾವಿ ಕೊರೆಸದೇ ಕರ್ತವ್ಯ ಲೋಪ ಎಸಗಿದ್ದಾರೆ. ಅದೇ ರೀತಿ, ಈ ಬಗ್ಗೆ ಸರಿಯಾದ ರೀತಿ ಸ್ಥಳ ಪರಿಶೀಲಿಸದೇ ಕೊಳವೆ ಬಾವಿ ಕೊರೆಸಲು ಅನುಮತಿ ನೀಡಿ, 2ನೇ ಎದುರುದಾರರು ಕಾನೂನು ಉಲ್ಲಂಘಿಸಿದ್ದಾರೆ. 2ನೇ ಎದುರುದಾರರು ಮತ್ತು ಸದರಿ ಜಮೀನಿನ ಮಾಲೀಕರಾದ ಶ್ರೀ. ವೆಂಕಟರಮಣಪ್ಪಬಿನ್ ರಾಮಪ್ಪ ರವರ ಜಮೀನಿನಿಂದ ಸಾರ್ವಜನಿಕರಿಗೆ ನೀರು ಪೂರೈಸಲು ಕರಾರು ಮಾಡಿಕೊಂಡಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಅನುಮತಿ ಪಡೆದು ಕರಾರು ಮಾಡಿರುವ ಬಗ್ಗೆ ಹೇಳಿದ್ದಾರೆ. ಆದರೆ, ಈ ಬಗ್ಗೆ ಸದರಿ ಕರಾರು ಪತ್ರದಲ್ಲಿ ಏನನ್ನು ಸಹ ಹೇಳಿಲ್ಲ. ಅದೇ ರೀತಿ, ಸಭಾ ನಡವಳಿ ಪುಸ್ತಕದಲ್ಲಿಯೂ ಸಹ ನಮೂದಾಗಿಲ್ಲ. ಈ ಅಂಶವನ್ನು 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಒಪ್ಪಿದ್ದಾರೆ. ಸದರಿ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಸಂಬಂಧಪಟ್ಟ ಕೊಳವೆ ಬಾವಿಗಳು ದುರಸ್ತಿಯಾಗದಿರುವ ಬಗ್ಗೆ ಸಾರ್ವಹನಿಕರು ಹಾಗೂ ಜಲಗಾರರು ಮನವಿ ಸಲ್ಲಿಸಿದ್ದರೂ ಸಹ ದುರಸ್ತಿ ಮಾಡದೇ ಕರ್ತವ್ಯ ಲೋಪ ಎಸಗಿದ್ದಾರೆ ಅದೇ ರೀತಿ, 3ನೇ ಎದುರುದಾರರು ಸಾರ್ವಜನಿಕ ನೀರು ಸರಬರಾಜಿಗಾಗಿ ಕೊರೆಸಿದ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ನೀಡದಿರುವುದು ಸಹ ಕಂಡು ಬಂದಿದೆ. 2ನೇ ಎದುರುದಾರರ ಸದರಿ ಕೊಳವೆ ಬಾವಿಯ ಮಾಲೀಕರಿಗೆ ಕಾನೂನುಬಾಹಿರವಾಗಿ ಕರಾರು ಮಾಡಿಕೊಂಡು ಟಾಸ್ಕ್ ಫೋರ್ಸ್ ವತಿಯಿಂದ ತಿಂಗಳಿಗೆ ರೂ. 2,000/- ಹಣ ನೀಡುವ ಬಗ್ಗೆ ಬಿಲ್ ತಯಾರಿಸಲು 2ನೇ ಎದುರುದಾರರಿಗೆ ಮಂಡಿಸಿರುವುದು ಸಹ ಕಂಡು ಬಂದಿದೆ.

9. ಈ ದೂರಿನಲ್ಲಿ ಈಗಾಗಲೇ 2ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯು ನಡೆದಿರುವುದರಿಂದ, ಸದರಿ 2ನೇ ಎದುರುದಾರರನ್ನು ನಡವಳಿಗಳಿಂದ ಕೈಬಿಟ್ಟು 1 ಮತ್ತು 3ನೇ ಎದುರುದಾರರನ್ನು ಮುಖಪುಟದಲ್ಲಿ ಕೈಬಿಟ್ಟಿರುವುದರಿಂದ, ಪುನಃ 1 ಮತ್ತು 3ನೇ ಎದುರುದಾರರನ್ನು, 2 ಮತ್ತು 3 ನೇ ಎದುರುದಾರರನ್ನಾಗಿ ಮುಖಪುಟದಲ್ಲಿ ಸೇರಿಸಿದೆ.

10. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಹಾಗೂ 2ನೇ ಎದುರುದಾರರ ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ 2 ಮತ್ತು 3ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

11. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ 2 ಮತ್ತು 3ನೇ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

ಈ ಹಿನ್ನೆಲೆಯಲ್ಲಿ ಶ್ರೀಮತಿ. ಶಾಲಿನಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಮುದುವಾಡಿ ಗ್ರಾಮ ಪಂಚಾಯತಿ ಕೋಲಾರ ತಾಲ್ಲೂಕು ಮತ್ತು ಜಿಲ್ಲೆ, ಇವರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ ನಿಯಮ 3(1)ರ ಅಡಿಯಲ್ಲಿ ದರ್ನಡ್ತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14 (ಎ) ರಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/179/ಗ್ರಾಪಂಕಾ/2017 ಬೆಂಗಳೂರು, ದಿನಾಂಕ–03–04–2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ. ಶಾಲಿನಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಮುದುವಾಡಿ ಗ್ರಾಮ ಪಂಚಾಯತಿ ಕೋಲಾರ ತಾಲ್ಲೂಕು ಮತ್ತು ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಗಳು ನಿಯಮ 14–ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕೋಲಾರ ಜಿಲ್ಲೆ
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ
6. ಶ್ರೀಮತಿ. ಶಾಲಿನಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಮುದುವಾಡಿ ಗ್ರಾಮ ಪಂಚಾಯತಿ ಕೋಲಾರ ತಾಲ್ಲೂಕು ಮತ್ತು ಜಿಲ್ಲೆ
7. ಗಣಕಕೋಶ.
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.